ತೆಂದರೆ ಒಬ್ಬೊಬ್ಬರಿಗೂ ಒಂದಕ್ಕಿಂತ ಹೆಚ್ಚು ಮನೆಗಳನ್ನು ಕಟ್ಟಿಸಿಕೊಟ್ಟಹಾಗಾಗಲಿಲ್ಲವೇ ?

ಶ್ರೀ ಕೆ. ಹನುಮಂತಯ್ಯನವರು.—ಆ 300 ಮನೆಗಳನ್ನು 56 ಅರ್ಜಿದಾರರಿಗೆ ಕಟ್ಟಿಸಿಕೊಟ್ಟಿಲ್ಲ. ಒಟ್ಟು 52 ಗ್ರಾಮಗಳಲ್ಲಿ ಕಟ್ಟಿಸಿರತಕ್ಕ ಮನೆಗಳ ಸಂಖ್ಯೆ 300 ಎಂದು ತಿಳಿಸಲಾಗಿದೆ. (ಸಿ) ಭಾಗದ ಉತ್ತರವನ್ನು ನೋಡಿ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—56 ಅರ್ಜಿಗಳು ಬಂದವು ಎಂದರೆ—300 ಮನೆಗಳನ್ನು ಹೇಗೆ ಕಟ್ಟಿಸಿಕೊಟ್ಟಿರಿ ?

ಶ್ರೀ ಕೆ. ಹನುಮಂತಯ್ಯನವರು.—ತಾವು ಮತ್ತೊಮ್ಮೆ ದಯವಿಟ್ಟು (ಸಿ) ಭಾಗಕ್ಕೆ ಒದಗಿಸಿರುವ ಉತ್ತರವನ್ನು ಸರಿಯಾಗಿ ನೋಡಿ. ತಮಗೇ ಅರ್ಥವಾಗುತ್ತದೆ.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಅರ್ಜಿಗಳೇ ಬಾರದೆ, ಹಾಗೆ ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟಿರತಕ್ಕ ನಿದರ್ಶನಗಳಿಲ್ಲವೇ ?

ಶ್ರೀ ಕೆ. ಹನುಮಂತಯ್ಯನವರು.—ಅಂಥ ಸಂದರ್ಭಗಳು ಸರ್ಕಾರದ ಕಣ್ಣಿಗೆ ಅಕಸ್ಮಾತ್ತಾಗಿ ಬಿದ್ದಿದ್ದರೆ, ಹಾಗೆ ಮಾಡಿದ್ದರೂ ಮಾಡಿರಬಹುದು.

Delay in disposal of Appeals before Government.

Q.—62. **Sri S. SRINIVASA IYENGAR** (T.-Narsipur).—

Will the Government be pleased to state :—

(*a*) the number of appeals (i) Revenue, (ii) Muzrai and pension papers pending before Government in 1947 and how many of them are now disposed of ;

(*b*) the number of appeals (i) Revenue, (ii) Muzrai and pension papers received since 1947 up to 1952 and the total number of them disposed of (yearwar information may kindly be furnished) ;

(*c*) whether it is a fact that the delay in the disposal of some of these subjects is due to the non-availability of the files ?

A.—**Sri Kadidal MANJAPPA** (Minister for Revenue and Public Works).—

(*a*)—

	Revenue appeals	Muzrai appeals	Pension cases
Pending on 1st June 1947.	121	...	...
Subsequently disposed.	120	Nil	Nil

(*b*)—

	Received	Disposed	Received	Disposed
1947-48 ...	218	193	15	14
1948-49 ...	244	186	18	17
1949-50 ...	246	171	28	24
1950-51 ...	338	238	33	32
1951-52 ...	371	129	39	17
	1,417	917		

(*c*) No.

Sri S. SRINIVASA IYENGAR.—Will the Government be pleased to let me know how many pension papers have been received by them from 47-48 to 51-52 ?

Sri Kadidal MANJAPPA.—Information is not available.

Sri S. SRINIVASA IYENGAR.—Will the Government give the information at least later ?

Sri Kadidal MANJAPPA.—There will be no pendency regarding pension papers because they are considered as urgent papers and they are considered then and there.

Sri S. SRINIVASA IYENGAR.—Out of 700 revenue appeals pending, how many are pending for the last five years ?

Mr. SPEAKER.—The figures speak for themselves.

Sri S. SRINIVASA IYENGAR.—The answer furnished is yearwar. My question was, how many appeals were pending for over 4 or 5 years ?

Sri Kadidal MANJAPPA.—Not more than two or three, I think.

Sri S. SRINIVASA IYENGAR.—In this pendency, have arguments been heard ?

Sri Kadidal MANJAPPA.—In some cases arguments have been heard and in some cases, arguments have not been heard.

Sri S. SRINIVASA IYENGAR.—What steps do the Government propose to take to dispose of the appeals early ?

Sri Kadidal MANJAPPA.—They are taking all steps possible.

Sri S. SRINIVASA IYENGAR.— What are the definite steps they are taking just to see that the appeals are disposed of early ?

Sri Kadidal MANJAPPA.—They are keen on hearing the cases and then disposing them of.

ಶ್ರೀ ಬಿ. ಮಾಧವಾಚಾರ್ ಅವರು (ಧಡ್ಕಾವತಿ).— ಹೀಗೆ ನಾಲ್ಕೂವರೆ ವರ್ಷಗಳಲ್ಲಿ 1,021 ಕೇಸುಗಳು ತೀರ್ಮಾನವಾಗಿರುತ್ತವೆ. ಆದರೆ ಹಿಂದೆ ಎಂದೂ ಈ ರೀತಿಯಾಗಿ ತೀರ್ಮಾನವಾಗುತ್ತಿರಲಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಬಂದಿಲ್ಲ.

ಶ್ರೀ ಬಿ. ಮಾಧವಾಚಾರ್ ಅವರು. —ಜನರಲ್ ಎಲೆಕ್ಷನ್ ಆದ ಮೇಲೆ ಬಂದ ಕೇಸುಗಳೂ ಇದರಲ್ಲೇ ಸೇರಿರುತ್ತವೆಯಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹೌದು. 1951-52ರಲ್ಲಿ ಸೇರಿರುತ್ತವೆ.

ಶ್ರೀ ಕೆ ಪ್ರಭಾಕರ್ ಅವರು (ನೆಲಮಂಗಲ—ಅನುಸೂಚಿತ ಜಾತಿಗಳು).—(ಬ) ಪ್ರಶ್ನೆಗೆ ಉತ್ತರವಾಗಿ 1947-48 ರಲ್ಲಿ ಮುಜರಾಯಿ ಅಫೀಲುಗಳ ಬಗ್ಗೆ ಬಂದ 15 ಕೇಸುಗಳಲ್ಲಿ 14 ಕೇಸುಗಳು ಮಾತ್ರ ತೀರ್ಮಾನವಾಗಿರುತ್ತವೆಂದು ತಿಳಿಸಲಾಗಿದೆ. ಬಾಕಿ ಉಳಿದ ಕೇಸು 47ನೇ ಸಾಲಿನಿಂದ ಇಲ್ಲಿಯತನಕ ಇತ್ಯರ್ಥವಾಗದಿರಲು ಈ ಕೇಸಿನ ಸ್ವರೂಪವೇನೆಂಬುದನ್ನು ತಿಳಿಸುವಿರಾ ?

Mr. SPEAKER.—That does not arise. One case is pending. That is all.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಈ ನಾಲ್ಕೂವರೆ ವರ್ಷಗಳಲ್ಲಿ ಹೀಗೆ ಸಾವಿರ ಚಿಲ್ಲರೆ ಕೇಸುಗಳು ಇತ್ಯರ್ಥವಾಗಿರತಕ್ಕ ಮಾದರಿಯಲ್ಲಿ ಹಿಂದೆ ಯಾವ ಕಾಲದಲ್ಲಾದರೂ ತೀರ್ಮಾನವಾಗಿದ್ದವೇ ?

ಅಧ್ಯಕ್ಷರು. —ಈ ಪ್ರಶ್ನೆಗೆ ಉತ್ತರವನ್ನು ಹಿಂದೆ ಆಗಲೇ ತಿಳಿಸಲಾಯಿತು.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).— 1947-48ರಲ್ಲಿ ದಾಖಲಾದ 218 ಕೇಸುಗಳ ಪೈಕಿ ತೀರ್ಮಾನವಾಗದೆ ಉಳಿದವುಗಳು 25 ಕೇಸುಗಳು, 1951-52ಕ್ಕೆ ದಾಖಲಾದ ಕೇಸುಗಳಲ್ಲಿ ತೀರ್ಮಾನವಾಗದೆ ಉಳಿದವುಗಳ ಸಂಖ್ಯೆ 242 ಆಗುತ್ತವೆ. ಆದ್ದರಿಂದ 47ನೇ ಸಾಲಿಗಿಂತಲೂ, ಈಗ ಈ ಕೇಸುಗಳ ತೀರ್ಮಾನ ಇನ್ನೂ ಹೆಚ್ಚು ನಿಧಾನವಾಗುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪನವರು.—ಕೇಸುಗಳು ಬರುತ್ತಿರುವುದೂ ಜಾಸ್ತಿಯಾಗಿದೆ, ತೀರ್ಮಾನವಾಗತಕ್ಕ ಕೇಸುಗಳ ಸಂಖ್ಯೆಯೂ ಜಾಸ್ತಿಯಾಗಿರುತ್ತದೆ.

ಶ್ರೀ ಬಿ. ಟಿ. ಕೆಂಪರಾಜುರವರು (ಬೆಂಗಳೂರು ದಕ್ಷಿಣ ಅನುಸೂಚಿತ ಜಾತಿಗಳು).—ಹೀಗೆ ಈ ಕೇಸುಗಳ ತೀರ್ಮಾನ ನಿಧಾನವಾಗುತ್ತಿರುವುದರಿಂದ ಜನರಿಗೆ ತುಂಬಾ ತೊಂದರೆಯಾಗಿರುತ್ತದೆಯೆಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಸರ್ಕಾರದವರಿಗೂ ತೊಂದರೆಯಾಗುತ್ತಿದೆ, ಬಡವರಿಗೂ ತೊಂದರೆಯಾಗುತ್ತಿದೆ, ಲಾಯರ್‌ಗಳಿಗೂ ತೊಂದರೆಯಾಗಿರುತ್ತದೆ.

Policy for granting Agricultural Land for Landless People.

Q.—93. **Sri G. SIVAPPA** (Holalkere).—

Will the Government be pleased to state :—

(*a*) whether they have laid down any policy for granting agricultural land for landless people; if so, what is the policy ;

(*b*) whether it has come to their notice that in most of the cases lands are not given for the poor ;

(*c*) whether it has come to their notice that in some cases rich and fertile lands were given to influential people for meagre sum of upset prices ;

(*d*) whether it is not their policy that lands should be given for *bona fide* agriculturists residing in the near locality ?

A.—**Sri Kadidal MANJAPPA** (Minister for Revenue and Public Works).—

(*a*) Yes. The policy of Government is contained in Rule 43 (i) of the Rules under the Land Revenue Code and orders of Government issued from time to time.

(*b*) No.

(*c*) No.

(*d*) Yes. As far as possible.

ಶ್ರೀ ಜಿ. ಶಿವಪ್ಪನವರು.—(ಎ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರ ಕಾರ್ಯನೀತಿಯನ್ನು ಲ್ಯಾಂಡ್ ರೆವೆನ್ಯೂ ಕೋಡಿನ (43) 1ನೆಯ ನಿಬಂಧನೆಯಲ್ಲಿ ತಿಳಿಸಲಾಗಿದೆ ಎಂದು ಹೇಳಿದ್ದೀರಿ. ಆದರೆ ಅದನ್ನು ಸ್ವಲ್ಪಮಟ್ಟಿಗಾದರೂ ಕಾರ್ಯಕ್ರಮದಲ್ಲಿ ಅನುಸರಿಸುತ್ತಿಲ್ಲವೆಂಬ ಅಂಶ ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ಕಾರ್ಯಗತಮಾಡುವುದಕ್ಕೆ ಪ್ರಯತ್ನಗಳನ್ನು ಮಾಡುತ್ತಲೇ ಇದ್ದೇವೆ.

ಶ್ರೀ ಜಿ. ಶಿವಪ್ಪನವರು—ಜಮೀನು ಬಹಳ ಬೆಲೆಯುಳ್ಳದ್ದಾಗಿದ್ದರೆ ಅದನ್ನು ಯಾವ ರೀತಿ ವಿಲೇವಾರಿ ಮಾಡುತ್ತೀರಿ ಸ್ವಾಮಿ ?

Sri Kadidal MANJAPPA.— It depends upon the nature of the land and also the competition. If there is keen competition and the land is valuable, we sell it in public auction.

ಶ್ರೀ ಜಿ. ಶಿವಪ್ಪನವರು.—ತಾವೇ ನೇರವಾಗಿ ಅದನ್ನು ಕೊಡುತ್ತೀರೋ ಅಥವಾ ಕೆಳ ನೌಕರರಿಂದ ತಪಶೀಲುಗಳನ್ನು ತರಿಸಿಕೊಂಡು ಕೊಡುತ್ತೀರೋ ?

ಅಧ್ಯಕ್ಷರು. ತಾವು ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ನೋಡಿದರೆ ಆ ತಪಶೀಲುಗಳೆಲ್ಲಾ ದೊರೆಯುತ್ತವೆ.